ಸಿ.ಸಿ. ನಂ. 567 /2019 ಪಿಡಬ್ಲ್ಯೂ-6

ಸಾಕ್ಷಿಗೆ ದಿನಾಂಕ 25.8.2022 ರಂದು ಪ್ರಮಾಣವಚನ ಬೋಧಿಸಲಾಯಿತು.

ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ

ನಾನು ಮೈಸೂರಿನಲ್ಲಿ ವಾಸ ಮಾಡುತ್ತಿದ್ದೇನೆ ಎಂದರೆ ಸರಿ. ನನ್ನ ಅಣ್ಣನ ಮಗ ಮೃತಪಟ್ಟ ನಂತರ ನನಗೆ ತಿಳಿದು ಬಂದಿರುತ್ತದೆ ಎಂದರೆ ಸಾಕ್ಷಿ ಆ ಸಮಯದಲ್ಲಿ ನಾನು ಹಾಜರಿದ್ದೆ ಎನ್ನುವರು. ಆರೋಪಿ ಕ್ಲಿನಿಕ್ ನಡೆಸುವ ಬಗ್ಗೆ ನಾಮಫಲಕ ಹಾಕಿರಲಿಲ್ಲ. ಸಾಮಾನ್ಯವಾಗಿ ವೈದ್ಯರು ಇಂಜಕ್ಷನ್ ನೀಡುವಾಗ ಪ್ರತ್ಯೇಕ ಕೋಣೆ ಇರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಕ್ಲಿನಿಕ್‌ಗೆ ಗ್ರಾಮಸ್ಥರು ಚಿಕಿತ್ಸೆ ಪಡೆದುಕೊಳ್ಳಲು ಹೋಗುತ್ತಾರೆ ಎಂದರೆ ಸರಿ. ನಾನು ಗ್ರಾಮದಲ್ಲಿ ವಾಸ ಮಾಡದ ಕಾರಣ ಎಂದಿಗೂ ಆರೋಪಿ ಕ್ಲಿನಿಕ್‌ಗೆ ಹೋಗಿರುವುದಿಲ್ಲ. ಆರೋಪಿಯೊಂದಿಗೆ ಎಂದೂ ಯಾವುದೇ ಪಂಚಾಯಿತಿ ಆಗಿರುವುದಿಲ್ಲ ಮತ್ತು ನಾನು ಭಾಗವಹಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಬರೆದುಕೊಟ್ಟಿರುತ್ತಾರೆ ಎಂದು ಹೇಳುವ ಆಧಾರಪತ್ರವನ್ನು ನನ್ನ ಅಣ್ಣ ಪೋಲಿಸರಿಗೆ ನೀಡಿರಬಹುದು. ನನ್ನ ಅಣ್ಣನ ಮಗನ ಸಾವಿಗೂ ಮತ್ತು ಆರೋಪಿಗೆ ಯಾವುದೇ ಸಂಬಂಧ ಇರುವುದಿಲ್ಲ, ಆತನಿಂದ ಅಕ್ರಮ ಲಾಭ ಪಡೆಯುವ ಸಲುವಾಗಿ ನನ್ನ ಅಣ್ಣ ಸಲ್ಲಿಸಿದ ಸುಳ್ಳು ದೂರಿನ ಪೂರಕವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣನ ಮಗನಿಗೆ ಹೃದಯ ಸಂಬಂಧಿ ಕಾಯಿಲೆ ಇತ್ತು ಎಂದರೆ ಸರಿಯಲ್ಲ. ಮೊದಲನೇ ಬಾರಿಗೆ ನನ್ನ ಅಣ್ಣನ ಮಗನನ್ನು ಆರೋಪಿ ಬಳಿ ಚಿಕಿತ್ಸೆಗೆ ಕರೆದುಕೊಂಡು ಹೋದಾಗ ನಾನು ಅವರ ಜೊತೆಯಲ್ಲಿ ಹೋಗಿರುವುದಿಲ್ಲ ಎಂದರೆ ಸರಿ. ಆರೋಪಿ ನನ್ನ ಅಣ್ಣನ ಮಗನಿಗೆ ಚಿಕಿತ್ಸೆ ನೀಡಿರುವುದನ್ನು ನಾನು ಖುದ್ದಾಗಿ ನೋಡಿರುವುದಿಲ್ಲ ಎಂದರೆ ಸರಿ. ಆರೋಪಿ ಬಳಿ ಚಿಕಿತ್ಸೆ ಕೊಡಿಸಿದ ಬಗ್ಗೆ ನಾನು ಬೇರೆಯವರಿಂದ ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ನನ್ನ ಅಣ್ಣನ ಮಗನನ್ನು ನಾನು ಕೆ.ಆರ್.ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲು ಮಾಡಿರುವುದಿಲ್ಲ. ನಾನು ನನ್ನ ಅಣ್ಣನ ಮಗನನ್ನು ಜೆ.ಎಸ್.ಎಸ್ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲು ಮಾಡಿದಾಗ ಕರೆದುಕೊಂಡ ವ್ಯಕ್ತಿ ಎಂದು ನನ್ನ ಹೆಸರು ನಮೂದಾಗಿರುವ ಬಗ್ಗೆ ಗೊತ್ತಿರುವುದಿಲ್ಲ. ಆರೋಪಿ ನನ್ನ ಅಣ್ಣನಿಗೆ ಯಾವುದೇ ಪರಿಹಾರ ನೀಡುತ್ತೇನೆ ಎಂದು ತಿಳಿಸಿರುವುದಿಲ್ಲ, ಅಕ್ರಮ ಲಾಭ ಪಡೆಯುವ ಸಲುವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದು ವೇಳೆ ಆರೋಪಿ ತಪ್ಪಿನಿಂದ ನನ್ನ ಅಣ್ಣನ ಮಗ ಮೃತಪಟ್ಟಿದ್ದರೆ ನಾವು ಮೃತಪಟ್ಟ ದಿನವೇ ದೂರು ದಾಖಲು ಮಾಡುತ್ತಿದ್ದೆವು ಎಂದರೆ ಸಾಕ್ಷಿ ಆರೋಪಿ ನಾನು ವೈದ್ಯನಾಗಿರುವುದಿಲ್ಲ, ಪರಿಹಾರ ನೀಡುತ್ತೇನೆ, ದೂರು ಕೊಡುವುದು ಬೇಡ ಎಂದು ಕೇಳಿಕೊಂಡ ಮೇರೆಗೆ ದೂರು ನೀಡಿರುವುದಿಲ್ಲ. ಪೋಲಿಸರೊಂದಿಗೆ ಶಾಮೀಲಾಗಿ ಸುಳ್ಳು ಪ್ರಕರಣವನ್ನು ಆರೋಪಿ ವಿರುದ್ದ ದಾಖಲು ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ